# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸ.ಕಾ.ನಿ.ಅ/ಶ್ರೀರಾಮ/ಪಿಆರ್/ /22–23

ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು,
ಪ್ರಕಾಶನಗರ, ವಾರ್ಡ್ ಮಟ್ಟದ ಸಮಿತಿ
ಪ್ರಕಾಶನಗರ, ವಾರ್ಡ್ ಸಂ.140
ಬೆಂಗಳೂರು, ದಿನಾಂಕ: 09/10/2022

**ದಿನಾಂಕ: 07/10/2022 ರಂದು ಬೆಳ್ಳಗ್ಗೆ 11.00 ಗಂಟೆಗೆ ನಡೆದ ಸಭಾ ನಡವಳಿಗಳು:**

**ಸಭೆಯಲ್ಲಿ ಹಾಜರಿದ್ದವರು.**

ಸಭೆಗೆ ಹಾಜರಿದ್ದ ವಾರ್ಡ್ ಕಮಿಟಿ ಅಧಿಕಾರಿ/ಸದಸ್ಯರು :

1. ಶ್ರೀ ಕೆ.ಪಿ ಯೋಗೇಸ್ ಸ.ಕಾ.ನಿ.ಅ ಹಾಗೂ ನೋಡೆಲ್ ಅಧಿಕಾರಿ
2. ಕುಮಾರಿ|| ಹಿತ್ಯೈಷಿಣಿ.ಎಸ್ ಸಹಾಯಕ ಅಭಿಯಂತರರು
3. ಶ್ರೀ ಎನ್.ಎಂ ತೋಪೆಗೌಡ್ರು ಕಂದಾಯ ಪರಿವೀಕ್ಷಕರು,
4. ಶ್ರೀ ಪದ್ಮನಾಭ ಸದಸ್ಯರು / ಸಾರ್ವಜನಿಕರು,
5. ಶ್ರೀ ಶರಣಬಸವ.ಎಂ ಮಾರ್ಷಲ್,
6. ಶ್ರೀ ಬಿ.ಎಸ್. ಪ್ರವೀಣ್ ಕುಮಾರ್ ಅಧ್ಯಕ್ಷರು
7. ಶ್ರೀ ಎಂ. ರಮೇಶ್ ಕಂದಾಯ ವಸೂಲಿಗಾರರು
8. ಶ್ರೀ ರವಣಯ್ಯ ಕಿರಿಯ ಆರೋಗ್ಯ ಪರಿವೀಕ್ಷಕರು.
9. ಶ್ರೀ ಲಕ್ಷ್ಮೀನಾರಾಯಣ.ಆರ್ ಬಿ.ಜೆ.ಪಿ

ಸಹಾಯಕ ಅಭಿಯಂತರರು ಕಾರ್ಯದರ್ಶಿ ಮತ್ತು ಸಂಚಾಲಕರು, ಸ.ಅ, ವಾರ್ಡ್ ಸಂ.140 (ಹಳೆ ನಂ.98) ವಾರ್ಡ್ ಸಮಿತಿಯ ಅಧ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತವನ್ನು ಕೋರುತ್ತಾ ಸಭೆಯನ್ನು ಪ್ರಾರಂಭಿಸಲು ತಿಳಿಸಿದರು. ಸಭೆಯಲ್ಲಿ ಹಾಜರಿದ ಸದಸ್ಯರು ಹಾಗು ಪಾಲಿಕೆಯ ಅಧಿಕಾರಿಗಳು ತಮ್ಮ ಪರಿಚಯ ನೀಡಿ ಸಭೆಯನ್ನು ಪ್ರಾರಂಭಿಸಲಾಯಿತು.

1. **ರಸ್ತೆ ಗುಂಡಿ ಮುಚ್ಚುವುದು:** ವಾರ್ಡ್‌ಸಂಖ್ಯೆ. 98 ವ್ಯಾಪ್ತಿಗೆ ಬರುವ ಕೋಂದಡಸ್ವಾಮಿ ದೇವಸ್ಥಾನ 6ನೇ ಅಡ್ಡರಸ್ತೆ ಹಾಗೂ ಸುತ್ತ ಮುತ್ತಲಿನಲ್ಲಿ ರಸ್ತೆ ಗುಂಡಿ ಮುಚ್ಚಲು ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಗೆ ಸೂಕ್ತ ಕ್ರಮವಹಿಸಲು ನಿರ್ದೇಶನ ನೀಡಿದರು.
2. ವಾರ್ಡ್ ವ್ಯಾಪ್ತಿಯಲ್ಲಿ Jio cable ರವರ ರಸ್ತೆಗಳಲ್ಲಿ ಗುಂಡಿ ತೆಗೆದಿದ್ದು, ಸಾರ್ವಜನಿಕರಿಗೆ ಇದರಿಂದ ತೊಂದರೆಯಾಗುತ್ತಿದೆ ಎಂದು ಸದಸ್ಯರು ಸಭೆಗೆ ತಿಳಿಸಿದಾಗ ನೋಡಲ್ ಅಧಿಕಾರಿಗಳು ಸಾರ್ವಜನಿಕರಿಗೆ ತೊಂದರೆಯಾಗದಂತೆ ಗುಂಡಿಗಳನ್ನು ಬೇಗನೆ ದುರಸ್ಥಿಗೊಳಿಸಲು ಸಂಬಂಧಪಟ್ಟ ಇಲಾಖೆಗೆ ನಿರ್ದೇಶನ ನೀಡಿದರು.
3. ವಾರ್ಡ್ ವ್ಯಾಪ್ತಿಯಲ್ಲಿ ಬರುವ ವಾರ್ಡ್ ಕಛೇರಿ ಮುಂದೆ ಬರುವ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳನ್ನು ಗುರುತಿಸಿಕೊಂಡು ಜನ ಸಾಮಾನ್ಯರಿಗೆ ಮತ್ತು ವಾಹನ ಸಂಚಾರಕ್ಕೆ ಸುಗಮವಾಗುವ ರೀತಿಯಲ್ಲಿ ದುಸ್ಥಿತಿಯಲ್ಲಿರುವ ರಸ್ತೆಗಳು ಮತ್ತು ಚರಂಡಿಗಳನ್ನು ಅಭಿವೃದ್ಧಿಪಡಿಸುವುದು ಅವಶ್ಯಕವಾಗಿರುತ್ತದೆ ಎಂದು ಸಭೆಗೆ ತಿಳಿಸಿದಾಗ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಗೆ ಸೂಕ್ತ ಕ್ರಮವಹಿಸಲು ನಿರ್ದೇಶನ ನೀಡಿದರು.

4. ವಾರ್ಡ್ ವ್ಯಾಪ್ತಿಗೆ ಬರುವ ಎಲ್ಲಾ ಕಡೆಗಳಲ್ಲಿ ಸಿಸಿಟಿವಿ ಕ್ಯಾಮರಗಳು ರಿಪೇರಿ ಕಾರ್ಯದ ವಿಷಯವಾಗಿ ಸಾರ್ವಜನಿಕರಿಂದ ಅನೇಕ ದೂರುಗಳು ಬರುತ್ತಿರುವುದರಿಂದ ಸದರಿ ಕ್ಯಾಮಾರಗಳನ್ನು ದುರಸ್ಥಿಪಡಿಸಲು ಸಭೆಯಲ್ಲಿ ವಿಷಯವನ್ನು ಪ್ರಸ್ತಾಪಿಸಿದಾಗ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಗೆ ಸೂಕ್ತ ಕ್ರಮವಹಿಸಲು ನಿರ್ದೇಶನ ನೀಡಿದರು.
5. ವಾರ್ಡ್ ವ್ಯಾಪ್ತಿಯಲ್ಲಿ ಬರುವ ಸಂಚಾರಿ ಪೋಲೀಸ್ ಇಲಾಖೆ ರವರಿಂದ ಕ್ಯಾಮಾರ ಫಿಕ್ಸ್ ಆಗಿರುತ್ತದೆ ಎಂದು ಸಭೆಗೆ ತಿಳಿಸಿದಾಗ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಗೆ ಸೂಕ್ತ ಕ್ರಮವಹಿಸಲು ನಿರ್ದೇಶನ ನೀಡಿದರು.
6. ವಾರ್ಡ್ ವ್ಯಾಪ್ತಿಯಲ್ಲಿ ಬರುವ ವಾರ್ಡ್ ಕಛೇರಿಯಲ್ಲಿ ಹೊಸದಾಗಿ ವಾರ್ಡ್ ಸಮಿತಿಯನ್ನು ನಡೆಸಲು ಇನ್ನೊಂದು ಕೊಠಡಿಯನ್ನು ನಿರ್ಮಿಸುವಂತೆ ಸಾರ್ವಜನಿಕರು ಸಭೆಗೆ ತಿಳಿಸಿದಾಗ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಗೆ ಸೂಕ್ತ ಕ್ರಮವಹಿಸಲು ನಿರ್ದೇಶನ ನೀಡಿದರು.
7. ಅರಣ್ಯ ಇಲಾಖೆಯವರಿಂದ 5 ಮರಗಳ ರೆಂಬೆ, ಕೊಂಬೆಗಳು ಕತ್ತರಿಸಲು ಸಾರ್ವಜನಿಕರು ಸಭೆಗೆ ತಿಳಿಸಿದಾಗ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಗೆ ಸೂಕ್ತ ಕ್ರಮವಹಿಸಲು ನಿರ್ದೇಶನ ನೀಡಿದರು.
8. ವಾರ್ಡ್ ವ್ಯಾಪ್ತಿಗೆ ಬರುವ ಬೀದಿ ದೀಪಗಳು ಸರಿಯಾಗಿ ಕಾರ್ಯ ನಿರ್ವಹಿಸದೇ ಇರುವ ಬಗ್ಗೆ ಸದಸ್ಯರು ಚರ್ಚೆ ಮಾಡಿದಾಗ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಯವರಿಗೆ ಪಾರ್ಕ್‌ನಲ್ಲಿರುವ ಬೀದಿ ದೀಪಗಳನ್ನು ದುರಸ್ತಿಗೊಳಿಸಲು ನಿರ್ದೇಶನ ನೀಡಿದರು.

ಮುಂದುವರೆದಂತೆ, ನೋಡಲ್ ಅಧಿಕಾರಿಗಳ ಅನುಮತಿ ಮೇರೆಗೆ ಸದಸ್ಯ ಕಾರ್ಯದರ್ಶಿಗಳಾದ ಹಾಗೂ ಸಹಾಯಕ ಇಂಜಿನಿಯರ್ ಆದ ಕುಮಾರಿ|| ಹಿತೈಷಿಣಿ.ಎಸ್ ಸಹಾಯಕ ಅಭಿಯಂತರರು ರವರು ಎಲ್ಲಾರಿಗೂ ವಂದಿಸಿ ಸಭೆ ಮುಕ್ತಾಯಗೊಳಿಸಿದರು.

**ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ಆದೇಶದ ಮೇರೆಗೆ,**

**ಕಾರ್ಯದರ್ಶಿ**
**ವಾರ್ಡ್ ಸಂ.140**

**ನೋಡಲ್ ಅಧಿಕಾರಿ**
**ವಾರ್ಡ್ ಮಟ್ಟದ ಸಮಿತಿ**
**ವಾರ್ಡ್ ಸಂ.140, ಪ್ರಕಾಶನಗರ**